OS No.108/2019 PW-2

**<u>ದಿನಾಂಕ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದಃ</u>**

ನನ್ನನ್ನು ಕರಿಹುಚ್ಚೇಗೌಡ ಅಲಿಯಾಸ್ ಪುಟ್ಟಸ್ವಾಮಿ ಎಂದು ಕರೆಯುತ್ತಾರೆ. ನಾನು ಕೆಲಸದಲ್ಲಿರುವಾಗ ಕರಿಹುಚ್ಚೇಗೌಡ ಎಂದು ಹೆಸರನ್ನು ಕೊಟ್ಟಿರುತ್ತೇನೆ. ಓ ಎಸ್ ಸಂಖ್ಯೆ 62/2013 ರಲ್ಲಿನಾನು ಸಾಕ್ಷಿ ನೀಡುವಾಗ ನನ್ನ ಹೆಸರನ್ನು ಕರಿಹುಚ್ಚೇಗೌಡ ಅಲಿಯಾಸ್ ಪುಟ್ಟಸ್ವಾಮಿ ಎಂದು ಕೊಟ್ಟಿರುತ್ತೆನೆ. ನಾನು ಪುಟ್ಟಸ್ವಾಮಿ ಎಂದು ಮಾತ್ರ ಕೊಟ್ಟಿರುತ್ತೇನೆಂದರೆ ನೆನಪಿಲ್ಲ. ನಾನು ಮತ್ತು ಇತರರು 1ನೇ ಪ್ರತಿವಾದಿ ವಿರುದ್ದ ಹುಲಿ ಹುಚ್ಚಪ್ಪ ಸ್ವಾಮಿ ದೇವಸ್ಥಾನದ ಪೂಜಾರಿಕೆಯ ವಿಚಾರವಾಗಿ 2-3 ದಾವಾ ಹಾಕಿರುತ್ತೇನೆಂದರೆ ನಿಜ. 1ನೇ ಪ್ರತಿವಾದಿಯ ತಂದೆಯ ಹೆಸರು ಪೂಜಾರಿ ಕಾಳಪ್ಪ ಎಂದರೆ ಸಾಕ್ಷಿಯು ಪೂಜಾರಿ ಕಾಳೇಗೌಡ ಮತ್ತು ಪೂಜಾರಿ ಕಾಳಪ್ಪ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ನಾನು 1ನೇ ಪ್ರತಿವಾದಿಯ ತಂದೆಯ ಚಿಕ್ಕಪ್ಪನ ಮೊಮ್ಮಗ. ಪೂಜಾರಿ ಕಾಳಪ್ಪ ರವರ ಕುಟುಂಬದ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ಪೂಜಾರಿ ಕಾಳಪ್ಪರವರು ಇರುವಾಗಲೂ ಮತ್ತು ತೀರಿಕೊಂಡ ಮೇಲೂ ಸಹ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ಕುಟುಂಬದ ವ್ಯವಹಾರದ ಬಗ್ಗೆ ದಾಖಲೆ ಇಲ್ಲ. ನನಗೂ ಮತ್ತು ಪೂಜಾರಿ ಕಾಳಪ್ಪರವರಿಗೂ ದೂರದ ಸಂಬಂದ ಮತ್ತು ಹತ್ತಿರದ ಸಂಬಂದವಿಲ್ಲ ಎಂದರೆ ಸುಳ್ಳು. ಪೂಜಾರಿ ಕಾಳಪ್ಪರವರು 2010 ರಲ್ಲಿ ತೀರಿಕೊಂಡಿರುತ್ತಾರೆ. ಪೂಜಾರಿ ಕಾಳಪ್ಪರವರು 30-35 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆಂದರೆ ಸುಳ್ಳು. ವಾದಿಯ ಹಿಸ್ಸೆಗೆ ಸಮನಾಗಿ ವಾದಿಗೆ ಆಭರಣ ಕೊಟ್ಟಿದ್ದಾರೆಂದರೆ ಸುಳ್ಳು. ನನಗೂ ಮತ್ತು 1ನೇ ಪ್ರತಿವಾದಿಗೂ ದೇವಸ್ಥಾನದ ವಿಚಾರವಾಗಿ ವೈಶಮ್ಯ ಇದ್ದುದ್ದರಿಂದ ವಾದಿಯನ್ನು ಎತ್ತಿಕಟ್ಟಿ ದಾವಾ ಹಾಕಿಸಿರುತ್ತೇನೆಂದರೆ ಸುಳ್ಳು.

ವಾದಿ ಓಡಾಡಿಕೊಂಡು ಇದ್ದಾರೆಂದರೆ ಸಾಕ್ಷಿಯು ಸಾಧಾರಣವಾಗಿ ಇದ್ದಾರೆ. ವಾದಿಗೆ ದಾವಾ ಹಾಕುವ ಇಚ್ಚೆ ಇಲ್ಲದೇ ಇದ್ದರೂ ವಾದಿಯ ಮಗನಿಗೆ ಜಿಪಿ ಎ ಕೊಡಿಸಿ ದಾವಾ ಹಾಕಿಸಿರುತ್ತೇನೆಂದರೆ ಸುಳ್ಳು. ಪೂಜಾರಿ ಕಾಳಪ್ಪರವರ ಕುಟುಂಬದ

ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**